ಕರ್ನಾಟಕ ಸರ್ಕಾರ

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ ನಿರ್ದೇಶನಾಲಯ**

ಸಂ ಕೆ.ಎಸ್.ಐ.ಸಿ.ಪಿಎಸ್/ಕೋವಿಡ್-19/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:14.04.2020

**ಅಧ್ಯಕ್ಷರು ಮತ್ತು ಸದಸ್ಯರು**
ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ
ಎಲ್ಲಾ ಜಿಲ್ಲೆಗಳು.

**ಮಾನ್ಯರೆ,**

**ವಿಷಯ:** ಕೋವಿಡ್ 19 ಸಾಂಕ್ರಾಮಿಕವಾಗಿರುವ ಹಿನ್ನೆಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳು ತುರ್ತು ಸಂದರ್ಭಗಳಲ್ಲಿ ಪಾಲನೆ ಮತ್ತು ರಕ್ಷಣೆ ಆವಶ್ಯಕತೆಯಿರುವ ಮಕ್ಕಳ ವಿಷಯದಲ್ಲಿ ಬಾಲನ್ಯಾಯ (ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರಂತೆ ಕ್ರಮಕೈಗೊಳ್ಳುವುದರ ಕುರಿತು.

**ಉಲ್ಲೇಖ:** ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ದಿನಾಂಕ:03.04.2020ರ ಸುಮೊಟೋ ರಿಟ್ ಅರ್ಜಿ(ಸಿವಿಲ್) ಸಂ.4,2020 ರ ಆದೇಶ.

ಕೋವಿಡ್ 19 ವೈರಾಣುವಿನ ಸೋಂಕಿನಿಂದಾಗಿ ದೇಶ ಎದುರಿಸುತ್ತಿರುವ ಆತಂಕಕಾರಿ ಸನ್ನಿವೇಶದಲ್ಲಿ ಮಕ್ಕಳ ಪಾಲನೆ ಮತ್ತು ರಕ್ಷಣೆ ಅತ್ಯಂತ ಅಗತ್ಯವಾದ ಜವಾಬ್ದಾರಿಯಾಗಿರುತ್ತದೆ.

1) ದಿಗ್ಬಂಧನ(ಲಾಕ್‌ಡೌನ್) ಘೋಷಿಸಿದ ಹಿನ್ನೆಲೆಯಲ್ಲಿ ಹಲವಾರು ಕಾರಣಗಳಿಂದ ಸರ್ಕಾರದ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿದ್ದ (ಸಿ.ಸಿ.ಐ) ಸಾಕಷ್ಟು ಸಂಖ್ಯೆಯ ಮಕ್ಕಳನ್ನು ಬಾಲ ನ್ಯಾಯ (ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರ ಅವಕಾಶಗಳನ್ನು ಬಳಸಿಕೊಂಡು ಅವರವರ ಪೋಷಕರ ಅಥವಾ ರಕ್ತ ಸಂಬಂಧಿಗಳ ಕುಟುಂಬಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಕ್ರಮವನ್ನು ಬಹಳ ಮುಂಜಾಗ್ರತೆಯಿಂದ ಕೈಗೊಂಡದ್ದು ಶ್ಲಾಘನೀಯ.

ಈಗಾಗಲೇ ಕುಟುಂಬಗಳಿಗೆ ಕಳುಹಿಸಲಾದ ಮಕ್ಕಳ ಸುರಕ್ಷತೆ ಮತ್ತು ಆರೋಗ್ಯದ ಅನುಸರಣೆಯನ್ನು ತಾವುಗಳು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದ ಅಧಿಕಾರಿಗಳು ಹಾಗೂ ಸಿ.ಸಿ.ಐ.ಗಳ ಸಿಬ್ಬಂದಿಗಳೊಡನೆ ಸಂಯೋಜಿತ ಸಭೆಗಳ ಮೂಲಕ (ಉದಾ. ದೂರವಾಣಿಕರೆ, ವಿಡಿಯೋಚಾಟ್ ಮೂಲಕ ಮಕ್ಕಳೊಡನೆ ಹಾಗೂ ಪೋಷಕರೊಡನೆ ಮಾತನಾಡಿ) ನಡೆಸಬೇಕೆಂದು ಕೋರುತ್ತಿದ್ದೇವೆ. ಇದಕ್ಕಾಗಿ ಮನೆಗೆ ಕಳುಹಿಸಿರುವ ಮಕ್ಕಳ ಪಟ್ಟಿ ಮಾಡಿ ಮಕ್ಕಳನ್ನು, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಂಸ್ಥೆ ಸಿಬ್ಬಂದಿಗಳಿಗೆ ಹಂಚಿಕೆ ಮಾಡಿ ನಿಯಮಿತವಾಗಿ(ರೆಗ್ಯುಲರ್ಲಿ) ದೂರವಾಣಿ ಅಥವಾ ವೀಡಿಯೋ ಕಾಲ್ ಮೂಲಕ ಮಾತನಾಡಿಸುವುದು. ಹಾಗೂ ಈ ಸಂದರ್ಭದಲ್ಲಿ ಯಾವುದೇ ಹಸ್ತಕ್ಷೇಪದ(ಇಂಟರ್‌ವೆನ್ಷನ್) ಅಗತ್ಯ ಕಂಡುಬಂದಲ್ಲಿ ಅದರಂತೆ ಕ್ರಮಕೈಗೊಳ್ಳುವುದು.

ಲಾಕ್‌ಡೌನ್ ಮತ್ತು ರೋಗದ ಭಯದಿಂದ ಉಂಟಾಗುವ ಆತಂಕ ಮತ್ತು ಒತ್ತಡದ ಸಂದರ್ಭಗಳಲ್ಲಿ ಯಾವುದೇ ರೀತಿಯ ಹಿಂಸೆ, ಲೈಂಗಿಕ ದೌರ್ಜನ್ಯ ಮತ್ತು ಲಿಂಗಾಧಾರಿತ ತಾರತಮ್ಯ ಸೇರಿದಂತೆ ವಿವಿಧ ರೀತಿಯ ಹಿಂಸಾಚಾರಗಳು ಉಲ್ಬಣಗೊಳ್ಳದಂತೆ ನೋಡಿಕೊಳ್ಳುವುದು.

REDMI NOTE 8
AI QUAD CAMERA

2) ಅಲ್ಲದೇ ಸಿಸಿಐಗಳಲ್ಲಿ ಸದ್ಯ ಇರುವ ಮಕ್ಕಳೊಡನೆಯೂ ಆಗಾಗ್ಗೆ ಮಕ್ಕಳ ಕಲ್ಯಾಣ ಸಮಿತಿಯವರು ದೂರವಾಣಿ ಮತ್ತು ವೀಡಿಯೋ ಚಾಟ್ ಮೂಲಕ ಮಾತನಾಡಿ ಮಕ್ಕಳ ಪಾಲನೆ, ರಕ್ಷಣೆ ಮತ್ತು ಆರೋಗ್ಯದ ಅನುಸರಣೆಯನ್ನು ಮಾಡಬೇಕಿದೆ.

3) ದೇಶದುದ್ದಕ್ಕೂ ದಿಗ್ಬಂಧನ ಘೋಷಿಸಿರುವ ಈ ಸಂದರ್ಭದಲ್ಲಿಯೂ ವಿವಿಧ ರೀತಿಯ ಸನ್ನಿವೇಶಗಳಿಂದ ಮಕ್ಕಳು ಸಂದಿಗ್ಧ ಪರಿಸ್ಥಿತಿಗಳಿಗೆ ದೂಡಲ್ಪಡುತ್ತಿದ್ದಾರೆ. ಕೌಟುಂಬಿಕ ದೌರ್ಜನ್ಯ, ಲೈಂಗಿಕ ದೌರ್ಜನ್ಯ, ಹಿಂಸೆ, ಲಿಂಗತಾರತಮ್ಯ, ತ್ಯಜಿಸಲ್ಪಡುವುದು ಅಥವಾ ತಂದೆ/ತಾಯಿ ಸಂಕಷ್ಟಕ್ಕೆ ಸಿಲುಕಿ ಮಕ್ಕಳು ಅನಾಥರಾಗುವುದೇ ಮೊದಲಾದ ಪ್ರಕರಣಗಳು ವಿವಿಧ ಜಿಲ್ಲೆಗಳಿಂದ ವರದಿಯಾಗುತ್ತಿದೆ.

ಇಂತಹ ಮಕ್ಕಳನ್ನು ಚೈಲ್ಡ್‌ಲೈನ್ 1098, ಪೊಲೀಸರು ಮತ್ತು ಡಿಸಿಪಿಯು ಹಾಗೂ ವಿವಿಧ ಸ್ವಯಂಸೇವಾ ಸಂಘಟನೆಗಳು ಗುರುತಿಸುವ ಪ್ರಕ್ರಿಯೆ ಎಂದಿನಂತೆ ಮುಂದುರೆದಿದ್ದು ಅಂತಹ ಮಕ್ಕಳನ್ನು ರಕ್ಷಿಸಲಾಗುತ್ತಿದೆ. ಹೀಗೆ ಮಕ್ಕಳನ್ನು ರಕ್ಷಿಸಿದ ಸಂದರ್ಭದಲ್ಲಿ ಸಂಬಂಧಿಸಿದವರು ಸೂಕ್ತ ಪ್ರಕ್ರಿಯೆಗಳನ್ನು ನಡೆಸಿ ಮಕ್ಕಳನ್ನು ಸಿ.ಸಿ.ಐ.ಗಳಿಗೆ ಕಳುಹಿಸಲು ತಮ್ಮ ಆದೇಶಗಳು ಅತ್ಯಾವಶ್ಯಕ.

ಮಕ್ಕಳನ್ನಾಗಲೀ, ಇತರ ಸಿಬ್ಬಂದಿಗಳನ್ನಾಗಲೀ ತಾವು ಮುಖತ: ಭೇಟಿ ಮಾಡಲು ಸಾಧ್ಯವಿಲ್ಲದ ಕಾರಣ ದೂರವಾಣಿಕರೆ, ಕಾನ್ಫರೆನ್ಸ್‌ಕಾಲ್, ವಿಡಿಯೋಚಾಟ್ ಇತ್ಯಾದಿಗಳ ಮೂಲಕ ಆಯಾ ಪ್ರಕರಣಗಳನ್ನು ಕಾನೂನಿನ ಚೌಕಟ್ಟಿನಲ್ಲಿ ವಿಚಾರಣೆ ನಡೆಸಿ ಸೂಕ್ತ ಆದೇಶಗಳನ್ನು ಇ-ಮೇಲ್ ಮೂಲಕ ನೀಡಲು ಕೋರಲಾಗಿದೆ.

ಯಾವುದೇ ಮಗು ತಮ್ಮ ಆದೇಶಗಳು ಸಮಯಕ್ಕೆ ಸರಿಯಾಗಿ ಸಿಗದೆ ವೃಥಾ ತೊಂದರೆಗೆ ಸಿಲುಕಬಾರದೆಂಬ ಕಳಕಳಿಯನ್ನು ತಾವುಗಳು ಒಪ್ಪಿಕೊಳ್ಳುತ್ತೀರೆಂದು ನಂಬಿದ್ದೇವೆ. ಮಕ್ಕಳನ್ನು ಸ್ವೀಕರಿಸುವ ಸರ್ಕಾರದ ಮತ್ತು ಸರ್ಕಾರೇತರ ಸಿ.ಸಿ.ಐ.ಗಳು ದತ್ತು ಸ್ವೀಕಾರ ಕೇಂದ್ರಗಳಿಗೆ ತಾವು ಸಮಯಕ್ಕೆ ಮತ್ತು ಅವಶ್ಯಕತೆಗೆ ತಕ್ಕಂತೆ ಸೂಕ್ತ ನಿರ್ದೇಶನಗಳನ್ನು ನೀಡಲು ಕೋರಲಾಗಿದೆ.

4) ಕೆಲವು ಸಿ.ಸಿ.ಐ.ಗಳು ಕೋವಿಡ್ 19ರ ಸಂದರ್ಭದಲ್ಲಿ ತಾವು ಮಕ್ಕಳನ್ನು ಸಂರಕ್ಷಿಸುತ್ತಿರುವುದಾಗಿಯೂ, ಅದಕ್ಕಾಗಿ ಆಹಾರ, ಔಷಧಿ ಮತ್ತಿತರ ಸಹಾಯ ಬೇಕೆಂದು ಸಾರ್ವಜನಿಕ ವೇದಿಕೆಗಳಲ್ಲಿ ಬೇಡಿಕೆಗಳನ್ನು ಸಲ್ಲಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಯಾವುದೇ ಮಗುವು ತೊಂದರೆಗೆ ಸಿಲುಕಬಾರದು ಎನ್ನುವ ಉದ್ದೇಶದಿಂದ ಯಾವುದೇ ಸಂಸ್ಥೆಯಲ್ಲಿ ಇಂತಹ ಬೇಡಿಕೆಗಳು ಬಂದಲ್ಲಿ ತಕ್ಷಣವೇ ಅವರನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಲು ತಮ್ಮನ್ನು ಕೋರುತ್ತಿದ್ದೇವೆ.

5) ಹಾಗೆಯೇ ಕೆಲವು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸದೇ ಪೋಷಕರೊಡನೆ / ತಂದೆ ತಾಯಿಯರೊಡನೆ / ಕುಟುಂಬದೊಡನೆ ಒಂದಾಗಲು ಅರ್ಹರಿರುವ ಮಕ್ಕಳನ್ನು ಅವಶ್ಯಕತೆ ಇಲ್ಲದೆ ಇರಿಸಿಕೊಂಡಿರುವುದು ಕಂಡು ಬಂದರೆ ಅಂತಹ ಮಕ್ಕಳನ್ನು ಅರ್ಹರೊಂದಿಗೆ ಒಗ್ಗೂಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ.

6) ಕೋವಿಡ್-19 ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಕ್ಕಳ ಪಾಲನೆ ಮತ್ತು ರಕ್ಷಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ದಿನಾಂಕ:03.04.2020ರ ಸುಮೊಟೋ ರಿಟ್ ಅರ್ಜಿ(ಸಿವಿಲ್) ಸಂ.4.2020 ರ 'ಆದೇಶ'ವನ್ನು ತಾವುಗಳು ಪರಾಂಬರಿಸಿ ಅದರಂತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಲಾಗಿದೆ.

ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಅನ್ವಯಿಸುವ ಅಂಶಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

"MEASURES TO BE TAKEN BY CHILD WELFARE COMMITTEES

REDMI NOTE 8
AI QUAD CAMERA

REDMI NOTE 8

CWCs are directed to proactively consider steps that are to be taken in the light of COVID 19, while conducting their inquiries/inspections and also whether a child or children should be kept in the CCI considering the best interest, health and safety concerns·

Special online sittings or video sessions may be called to consider measures that may be taken to prevent children residing in the Children's Homes, SAAs, and Open Shelters from risk of harm arising out of COVID 19 ·

Gate keeping or preventive measures need to be considered and families counselled to ensure that institutionalization is the last resort. Focus should be on prevention of separation when possible.

CWCs to monitor cases telephonically for children who have been sent back to their families and coordinate through the District Child Protection Committees and Foster care and Adoption Committees (SFCACs) for children in foster care.

As far as possible, online help desks and support systems for queries to be established at the state level for children and staff in CCIs.

It is important to consider that violence, including sexual and gender based violence may be exacer bated in contexts of anxiety and stress produced by lockdown and fear of the disease, CWCs can monitor regularly through video conferencing, WhatsApp and telephonically to ensure prevention of all forms of violence" ಎಂದಿರುತ್ತದೆ.

7. ದಿನಾಂಕ:13.04.2020ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಒಂದು ಅಧಿಸೂಚನೆಯನ್ನು ಹೊರಡಿಸಿ ಸದರಿ ಅಧಿಸೂಚನೆಯ ಮೂಲಕ ಈ ಕೆಳಕಂಡಂತೆ ತಿಳಿಸಿದೆ.

"It is declared that there shall be **"closure"** of all the District and Trial Courts, Family Courts, Labour Courts and Industrial Tribunals in the state from **April 15 to April 30, 2020"**.

"In case of extreme urgency a request for taking up a case which is already filed can be made by sending **e-mail**".

"New Matters can be filed only by way of **e-filing** ".

ಮೇಲಿನ ಉಚ್ಚನ್ಯಾಯಾಲಯದ ಅಧಿಸೂಚನೆಯಲ್ಲಿ ಮೇಲೆ ವಿವರಿಸಿದ ಅಂಶಗಳನ್ನು ಪ್ರತ್ಯೇಕವಾಗಿ ಗಮನಿಸಬಹುದಾಗಿದೆ. ರಾಜ್ಯದಲ್ಲಿರುವ ಎಲ್ಲಾ ನ್ಯಾಯಸ್ಥಾನಗಳಿಗೆ ಅನ್ವಯವಾಗುವಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಹೊರಡಿಸಿದ ಮೇಲಿನ ಆದೇಶವನ್ನು ಕ್ವಾಸಿ ಜ್ಯುಡೀಷಿಯಲ್ ಬಾಡೀಸ್ ಆಗಿರುವಂತಹ ಸಿಡಬ್ಲ್ಯೂಸಿ ಮತ್ತು ಜೆಜೆಬಿಗಳೂ ಸಹ ಗಮನದಲ್ಲಿಟ್ಟುಕೊಂಡು ಅದೇ ರೀತಿ extreme urgency ಇರುವ ವಿಷಯಗಳಲ್ಲಿ ಮಾತ್ರ ಅದೂ ಕೂಡ ಆನ್‌ಲೈನ್ ಮುಖಾಂತರ ಮಾತ್ರ ಪ್ರಕರಣಗಳನ್ನು ನಡೆಸಬಹುದಾಗಿದೆ. ಸದರಿ ನೋಟಿಫಿಕೇಷನ್ ಪ್ರತಿಯನ್ನು ಲಗತ್ತಿಸಲಾಗಿದೆ.

ಇವುಗಳನ್ನು ನಿರ್ವಹಿಸಲು ಎಂದಿನಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮನ್ವಯಯೊಂದಿಗೆ ನಡೆಸುತ್ತಿರುವ ದೂರವಾಣಿ ಹಾಗೂ ವೀಡಿಯೋ ಸಭೆಗಳನ್ನು ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹಾಗೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಕ್ಕಳ ಪಾಲನೆ, ಸುರಕ್ಷತೆ, ಆರೋಗ್ಯ ಮತ್ತು ನೆಮ್ಮದಿಯನ್ನು ಕಾಪಾಡಲು ತಾವುಗಳು ನಡೆಸುತ್ತಿರುವ ದೂರವಾಣಿ ಹಾಗೂ ವೀಡಿಯೋ ಚಾಟ್ ಕ್ರಮಗಳನ್ನು ಮುಂದುವರೆಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ತಮ್ಮ ವಿಶ್ವಾಸಿ,

15.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA